ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,
ಕುಮಟಾ.

ಸಿಸಿ ನಂ. 34/2023

| | | |
|---|---|---|
| ಹೆಸರು | – | ಸುರೇಖಾ |
| ತಂದೆಯ ಹೆಸರು | – | ಬಾಬು ಗುನಗಿ |
| ವಯಸ್ಸು | – | 52 ವರ್ಷ |
| ಉದ್ಯೋಗ | – | ಕೋರ್ಟ ಉದ್ಯೋಗಿ |
| ವಾಸ್ತವ್ಯ | – | ಜೆ ಎಮ್ ಎಫ್ ಸಿ ನ್ಯಾಯಾಲಯ, ತಾಃ ಹೊನ್ನಾವರ |

– ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿ ಆರೋಪಿಯ ಹೆಚ್ಚುವರಿ ಹೇಳಿಕೆ –

ಪ್ರಶ್ನೆ – 1 ಈ ಪ್ರಕರಣದಲ್ಲಿನ ಸಾಕ್ಷಿದಾರರ ಹೇಳಿಕೆಯನ್ನು ಓದಿ, ಹೇಳಿ, ಕೇಳಿ, ತಿಳಿದು ಕೊಂಡಿದ್ದೀರಾ?

ಉತ್ತರ –

**ಪ್ರಶ್ನೆ – 2** ಪಿ ಡಬ್ಲ್ಯೂ 2 – ನಾಗರಾಜ ಪಾಂಡುರಂಗ ನಾಯ್ಕ ಇವರು ತಮ್ಮ ಸಾಕ್ಷ್ಯದಲ್ಲಿ , ನೀವು ಹಾಗೂ ಅವರು ಪರಿಚಯಸ್ತರಿದ್ದು , ಬಹಳ ವರ್ಷಗಳಿಂದ ತುಂಬಾ ಪರಿಚಯಸ್ಥರಾಗಿರುತ್ತೀರಿ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ– 3** ಪಿಡಬ್ಲ್ಯೂ 2 – ಇವರು ಮುಂದುವರಿದು, ಹೀಗಿರುವಲ್ಲಿ 2017 ರ ಡಿಸೆಂಬರ ತಿಂಗಳ ಕೊನೆಯ ವಾರದಲ್ಲಿ ನೀವು ಅವರನ್ನು ಭೇಟಿಯಾಗಿ ನಿಮಗೆ ವೈಯಕ್ತಿಕ ಕೆಲಸಕ್ಕೆ ರೂ . 3,00,000/–ಗಳ ಅವಶ್ಯಕತೆ ಇದೆ ಹಣವನ್ನು ಮೂರು ತಿಂಗಳಲ್ಲಿ ಮರುಪಾವತಿಸುತ್ತೇನೆಂದು, ಹಣವನ್ನು ಹೊಂದಿಸಿ ಕೊಡುವಂತೆ ಪರಿ ಪರಿಯಾಗಿ ಕೇಳಿಕೊಂಡಿರುತ್ತೀರಿ ಎಂದು ಹೇಳಿರುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 4** ಪಿಡಬ್ಲ್ಯೂ 2 – ಇವರು ಮುಂದುವರಿದು, ನಿಮಗೆ ಸಹಾಯ ಮಾಡುವ ಏಕೈಕ ಉದ್ದೇಶದಿಂದ ಅವರು ದಿಃ 04-01-2018 ರಂದು ನಿಮಗೆ ರೂ. 3,00,000/- ಗಳನ್ನು ಹೊಂದಿಸಿ ಕೊಟ್ಟಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 5** ಪಿಡಬ್ಲ್ಯೂ 2 – ಇವರು ಮುಂದುವರಿದು, ಹೀಗೆ ಹಣ ಪಡೆದ ಮೂರು ತಿಂಗಳ ನಂತರ ಅವರು ನಿಮ್ಮ ಬಳಿ ಸಾಕಷ್ಟು ಬಾರಿ ಹಣ ಮರುಪಾವತಿಸುವಂತೆ ಕೇಳಿದಾಗಲೆಲ್ಲಾ ಇಂದಲ್ಲ ನಾಳೆ ಹಣ ನೀಡುತ್ತೇನೆಂದು ಹಾರಿಕೆ ಉತ್ತರ ನೀಡುತ್ತಾ ಬಂದಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 6** ಪಿಡಬ್ಲ್ಯೂ 2 – ಇವರು ಮುಂದುವರಿದು, ಕೊನೆಯದಾಗಿ ದಿಃ 01-12-2018 ರಂದು ಅವರು ನಿಮಗೆ ಭೇಟಿಯಾಗಿ ಹಣ ಮರಳಿ ಕೊಡುವಂತೆ ಕೇಳಿರುತ್ತಾರೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 7** ಪಿಡಬ್ಲ್ಯೂ 2 – ಇವರು ಮುಂದುವರಿದು, ಆ ರೀತಿ ಕೇಳಿದಾಗ ನೀವು ಹಣ ಮರುಪಾವತಿಗೆ ಸಂಬಂಧಿಸಿದಂತೆ ತನ್ನ ಬಳಿ ಈಗ ಅಷ್ಟು ನಗದು ಹಣವಿಲ್ಲದ ಕಾರಣ ನೀವು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕುಮಟಾ ಶಾಖೆಯ ನಿಪಿ -1 ಚೆಕ್ ನಂ. 620227 ನೇದನ್ನು ರೂ. 3,00,000/- ಗಳಿಗೆ ದಿಃ 01-12-2018 ನಮೂದಿಸಿ ಚೆಕ್ ನ್ನು ಅವರಿಗೆ ನೀಡಿರುತ್ತಾರೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ – 8** ಪಿ ಡಬ್ಲ್ಯೂ 2 – ರವರು ಮುಂದುವರೆದು , ಆ ರೀತಿ ನೀಡಿ ಸದರ ಚೆಕ್ ನ್ನು ನಗದಿಕರಣಕ್ಕೆ ಹಾಕಿ ಚೆಕ್ ನಗದಾಗುತ್ತದೆ ಎಂದು ನಂಬಿಸಿ , ನಗದಿಕರಿಸಿಕೊಳ್ಳಲು ವಿನಂತಿಸಿಕೊಂಡಿರುತ್ತೀರಿ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ– 9** ಪಿಡಬ್ಲ್ಯೂ 2 – ಇವರು ಮುಂದುವರಿದು, ಆ ರೀತಿ ನಂಬಿಸಿದಾಗ ನಿಮ್ಮ ಮಾತನ್ನು ನಂಬಿದ ಅವರು ಹಣ ಪಡೆದುಕೊಳ್ಳಲು ಅದೇ ದಿನ ದಿಃ 01-12-2018 ರಂದು ಅವರ ಖಾತೆಯಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕುಮಟಾ ಶಾಖೆಗೆ ನಗದಿಕರಣಕ್ಕೆ ಹಾಕಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ– 10** ಪಿಡಬ್ಲ್ಯೂ 2 – ಇವರು ಮುಂದುವರಿದು, ಅದೇ ದಿನ ದಿಃ 01-12-2018 ರಂದು ಸ್ಟೇಟ್ ಬ್ಯಾಂಕ್ ಆಫ ಇಂಡಿಯಾ ಕುಮಟಾ ಶಾಖೆಯವರು ನಿಮ್ಮ ಬ್ಯಾಂಕ ಖಾತೆಯನ್ನು ಮುಕ್ತಾಯಗೊಳಿಸಿರುವ ಕುರಿತು "Account Closed" ಎಂಬ ಹಿಂಬರಹ ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ– 11** ಪಿಡಬ್ಲ್ಯೂ 2 – ಇವರು ಮುಂದುವರಿದು, ಚೆಕ್ ನಲ್ಲಿ ನಮೂದು ಮಾಡಿದ ಹಣವು ನ್ಯಾಯಯುತವಾಗಿ ನೀವು ಅವರಿಗೆ ಕೊಡತಕ್ಕದ್ದು ಇದ್ದು ಅದನ್ನು ನ್ಯಾಯಯುತವಾಗಿ ವಸೂಲ ಮಾಡಲು ಅವರು ಅರ್ಹರಿರುತ್ತಾರೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 12** ಪಿಡಬ್ಲ್ಯೂ 2 – ಇವರು ಮುಂದುವರಿದು, ನಿಮಗೆ ಹಣವನ್ನು ಕೊಡುವಾಗ ಅವರು ಆರ್ಥಿಕವಾಗಿ ಸಬಲರಾಗಿರುತ್ತಾರೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 13** ಪಿಡಬ್ಲ್ಯೂ 2 – ಇವರು ಮುಂದುವರಿದು, ಈ ಕುರಿತು ಅವರು ಅವರ ವಕೀಲರ ಮೂಲಕ ದಿಃ 10-12-2018 ರಂದು ನಿಮ್ಮ ವಿಳಾಸಕ್ಕೆ ನೋಟಿಸ್ ನೀಡಿರುತ್ತಾರೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 14** ಪಿಡಬ್ಲ್ಯೂ 2 – ಇವರು ಮುಂದುವರಿದು, ಸದರ ನೋಟಿಸು ಮುಟ್ಟಿದ 15 ದಿನಗೊಳಗಾಗಿ ಈ ಮೇಲೆ ವಿವರಿಸಿದ ಚೆಕ್ ರಖಂ ರೂ . 3,00,000/- ಗಳನ್ನು ವಸೂಲ ಕೊಡುವಂತೆ ಮಾಗಣಿ ಮಾಡಿ ನೋಂದಾಯಿತ ಅಂಚೆ ಸ್ವೀಕೃತಿ ಮೂಲಕ ಕಳಿಸಿದ ನೋಟಿಸು, ನಿಮಗೆ ದಿಃ 13-12-2018 ರಂದು ಜಾರಿಯಾಗಿರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 15** ಪಿಡಬ್ಲ್ಯೂ 2 – ಇವರು ಮುಂದುವರಿದು, ನೀವು ಚೆಕ್ ರಖಂ ಮರುಪಾವತಿಸದೇ, ಸುಳ್ಳು ಮಜಕೂರಿನ ಉತ್ತರ ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 16** ಪಿಡಬ್ಲ್ಯೂ 2 – ಇವರು ಮುಂದುವರಿದು, ಈ ರೀತಿ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರೂ ಅವರಿಗೆ ಬುದ್ಧ್ಯಾ ಮೋಸ ಹಾಗೂ ವಂಚನೆ ಮಾಡುವ ಉದ್ದೇಶದಿಂದ

ದಿಃ 01-12-2018 ರಂದು ರೂ. 3,00,000/- ಗಳಿಗೆ ಬೋಗಸ್ ಚೆಕ್ ನೀಡಿರುತ್ತೀರಿ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ -</u>

<u>**ಪ್ರಶ್ನೆ- 17**</u> ಪಿಡಬ್ಲ್ಯೂ 2 - ಇವರು ಮುಂದುವರಿದು, ನೀವು ಎನ್ ಐ ಎಕ್ಟ ಕಲಂ 138 ರನ್ವಯ ಶಿಕ್ಷಾರ್ಹ ಅಫರಾಧ ಎಸಗಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ -</u>

<u>**ಪ್ರಶ್ನೆ - 18**</u> ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುತ್ತೀರಾ?

<u>ಉತ್ತರ -</u>

<u>**ಪ್ರಶ್ನೆ - 19**</u> ನಿಮ್ಮ ಪರ ರಕ್ಷಣಾ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

<u>ಉತ್ತರ -</u>

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ದಿಃ 02-04-2024. ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ